ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

ಕೃಷಿ ಹವಾಮಾನ ವಿಭಾಗ, ಜಿ.ಕೆ.ವಿ.ಕೆ, ಬೆಂಗಳೂರು-65

ನಾಯನಹಳ್ಳಿಯ ಕೃಷಿ ಹವಾಮಾನ ಮುನ್ಸೂಚನೆ

ದಿನಾಂಕ:21.06.16

ಈ ವಾರದ ಮುನ್ಸೂಚನೆ (22.6.16 to 26.6.16 ವರೆಗೆ)

ನಿಯತಾಂಕಗಳು	22.06.16	23.06.16	24.06.16	25.06.16	26.06.16
ಮಳೆ (ಮಿ ಮಿ)	5	0	1	0	4
ಗರಿಷ್ಠ ಉಷ್ಣಾಂಶ(ಡಿ.ಸೆ.)	29	29	28	28	28
ಕನಿಷ್ಠ ಉಷ್ಣಾಂಶ (ಡಿ.ಸೆ.)	19	20	20	20	20
ಮೋಡ (ಪ್ರಮಾಣ)	7	7	6	6	6
ಅರ್ದ್ರತೆ ೭.೨೦ ಬೆ (ಶೇ)	98	96	86	84	84
ಅರ್ದ್ರತೆ ೨.೨೦ ಮ (ಶೇ)	51	54	54	53	50
ಗಾಳಿಯ ವೇಗ (ಕಿ.ಮಿ/ಗಂಟೆಗೆ)	30	35	23	25	24
ಗಾಳಿಯ ದಿಕ್ಕು (ಡಿಗ್ರಿ)	264	275	288	270	287

ಭಾರತೀಯ ಹವಾಮಾನ ಇಲಾಖೆಯ ಮುನ್ಸೂಚನೆಯ ಪ್ರಕಾರ ನಾಯನಹಳ್ಳಿ ಹಾಗೂ ಸುತ್ತಮುತ್ತ ಮುಂದಿನ ಐದು ದಿನಗಳು ಮೋಡ ಕವಿದ ವಾತಾವರಣವಿದ್ದು ಹಗುರ ಮಳೆಯಾಗುವ ಸಾಧ್ಯತೆ ಇದೆ. ದಿನದ ಗರಿಷ್ಠ ಉಷ್ಣಾಂಶವು 28-29^{o}C ಮತ್ತು ಕನಿಷ್ಠ 19-20^{o}C ಇರಲಿದೆ. ಬೆಳಗಿನ ಆರ್ದ್ರತೆ ಪ್ರಮಾಣ ಶೇ 84-98 % ಇದ್ದು, ಮಧ್ಯಾಹ್ನ 50-54% ಇರುವುದು ಮತ್ತು ಗಾಳಿಯು ಗಂಟೆಗೆ ಸರಾಸರಿ 23-35 ಕಿ.ಮೀ. ವೇಗದಲ್ಲಿ ಬೀಸುವ ಸಂಭವವಿದೆ.

ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ

- ✓ ದುರ್ಬಲವಾಗಿರುವ ಮುಂಗಾರು ಮಳೆ ಇರುವುದರಿಂದ ಮುಂಗಾರು ಬಿತ್ತನೆಯನ್ನು ತೇವಾಂಶದ ಆಧಾರದ ಮೇಲೆ ಮುಂದುವರಿಸಿ. ಬಿತ್ತನೆಗೆ ಭೂಮಿಯನ್ನು ಮಟ್ಟಮಾಡಿ ಸಮನಾಗಿರುವಂತೆ ಹದಮಾಡಿ.
- ✓ ಕೃಷಿ ಭೂಮಿಯನ್ನು ಆಳವಾಗಿ ಉಳುಮೆ ಮಾಡಬೇಕು. ಹಾಗೆ ಮಾಡುವುದರಿಂದ ನೀರು ಮಣ್ಣಿನಲ್ಲಿ ಚೆನ್ನಾಗಿ ಹಿಂಗುತ್ತದೆ.
- ✓ ಖುಷ್ಕಿ ಜಮೀನಿನಲ್ಲಿ ಬದುಗಳನ್ನು ಭದ್ರಗೊಳಿಸಬೇಕು, ಸೂಕ್ತ ಬಸಿಗಾಲುವೆಗಳನ್ನು ನಿರ್ಮಿಸಿಕೊಂಡು ನೀರು ನಿಲ್ಲದಂತೆ ನೋಡಿಕೊಳ್ಳಿ
- ✓ ಬಿತ್ತನೆಗೆ ಬೇಕಾದ ಉತ್ತಮ ಗುಣಮಟ್ಟದ ಬೀಜಗಳನ್ನು ಹತ್ತಿರದ ರೈತ ಸಂಪರ್ಕ ಕೇಂದ್ರದಲ್ಲಿ ಖರೀದಿಸಲು ಸೂಚಿಸಲಾಗಿದೆ
- ✓ **ಏಕಬೆಳೆ ಪದ್ದತಿಯಲ್ಲಿ ಈ ಕೆಳಗಿನ ದೀರ್ಘಾವಧಿ ತಳಿಗಳನ್ನು ಬಿತ್ತನೆ ಮಾಡಲು ಸೂಚಿಸಲಾಗಿದೆ**

  ತೊಗರಿ : ಟಿ.ಟಿ.ಬಿ-7, ಬಿ.ಆರ್.ಜಿ-1,2,4ಮತ್ತು 5

  ಹರಳು: ಡಿ.ಸಿ.ಎಸ್-9 (ಜ್ಯೊತಿ), ಡಿ.ಸಿ.ಎಚ್-177 ಮತ್ತು 32
- ✓ **ಎರಡುಬೆಳೆ ಪದ್ದತಿಯಲ್ಲಿ ಈ ಕೆಳಗಿನ ತಳಿಗಳನ್ನು ಬಿತ್ತನೆ ಮಾಡಲು ಸೂಚಿಸಲಾಗಿದೆ.**

  ರಾಗಿ: ಇಂಡಾಫ್-9, ಎಳ್ಳು : ನವಿಲೆ-1, ಟಿ-7, ಅಲಸಂದೆ : ಟಿ.ವಿ.ಎಕ್ಸ್-944, ಕೆ.ಬಿ.ಸಿ-1

  ಹೆಸರು :ಪಿ.ಎಸ್-16, ಪಿ.ಡಿ.ಎಮ್-84, 178 , ಉದ್ದು: ಕರಗಾವ್-3, ಟಿ-9, ರಶ್ಮಿ

ಜೂನ್‌ನಲ್ಲಿ ಮುಸುಕಿನ ಜೋಳ + ತೊಗರಿ (1:1 ಸಾಲುಗಳ ಪ್ರಮಾಣದಲ್ಲಿ), ನೆಲಗಡಲೆಯಲ್ಲಿ + ತೊಗರಿ ಪ್ರತಿ 8 ಸಾಲಿಗೆ 2 ಸಾಲಿನಂತೆ ಅಂತರ ಬೆಳೆಯಾಗಿ ಹಾಗೂ ರಾಗಿ + ತೊಗರಿ (8:2), ಸುಧಾರಿತ ತಳಿಗಳಾದ ಇಂಡಾಫ್-8 ಅಥವಾ ಎಮ್.ಆರ್-1 ರಾಗಿ ಬೆಳೆಯುವುದು ಸೂಕ್ತ. ದ್ವಿದಳ ಧಾನ್ಯ ಬೆಳೆಗಳನ್ನು ಬಿತ್ತುವ ಮುನ್ನ ಜೈವಿಕ ಗೊಬ್ಬರಗಳಾದ ರೈಜೋಬಿಯಮ್ ನಿಂದ ಬೀಜೋಪಚಾರ ಮಾಡಬೇಕು

ಸಸ್ಯ ಸಂರಕ್ಷಣೆ:

- ✓ ಮುಂದಿನ ಐದು ದಿನಗಳು ಮಳೆ ಬರುವ ಸಂಭವವಿರುವುದರಿಂದ ಔಷಧಿ ಸಿಂಪರಣೆ ಮಾಡದಿರಲು ಸೂಚಿಸಲಾಗಿದೆ.

ನೋಡಲ್ ಅಧಿಕಾರಿ:

ಕೃಷಿ ಹವಾಮಾನ ವಿಭಾಗ

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು